ಅಧ್ಯಕ್ಷರು : ಜೆ.ಎಸ್.ಎಸ್.ಗೂ ಇದಕ್ಕೂ ಏನೂ ಸಂಬಂಧ ಇಲ್ಲವೇ

ಶ್ರೀ ಇ. ಟಿ. ಶಂಭುನಾಥ್ : ಇಲ್ಲ

ಅಧ್ಯಕ್ಷರು : ಇದು ಇಲ್ಲಿಗೆ ಮುಗಿಯಿತು.ಈಗ ನಿಯಮ 334 ರ ಮೇಲಿನ ಚರ್ಚೆ.

ನಿಯಮ ೩೩೪ರ ಮೇಲೆ ಚರ್ಚೆ

ರಾಜ್ಯದ ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ದೂರವಾಣಿ ಸಂಪರ್ಕ ಕಡಿದು ಹೋಗಿರುವುದು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ,

ಕರ್ನಾಟಕ ರಾಜ್ಯದ ಜಿಲ್ಲಾ ಕೈಗಾರಿಗಾ ಕೇಂದ್ರಗಳಲ್ಲಿ ದೂರವಾಣಿ ಸಂಪರ್ಕ ಕಡಿದು ಹೋಗಿರುವ ವಿಷಯದಲ್ಲಿ ಸರ್ಕಾದ ಉದಾಸೀನ ನೀತಿಯು ತುಂಬಾ ಆಶ್ಚರ್ಯಕರವಾಗಿದೆ.

ಶಿವಮೊಗ್ಗದ ಜಿಲ್ಲಾ ಕೈಗಾರಿಗಾ ಕೇಂದ್ರದ ದೂರವಾಣಿ ಸಂಪರ್ಕ ಕಡಿದು ಹೋಗಿರುವುದಲ್ಲದೆ, ನಿತ್ಯೋಪಯೋಗಕ್ಕೆ ಬೇಕಾಗುವ ಪೇಪರ್ ಇಂಕ್‌ಗಳಿಗಾಗಿಯೂ ಹಣ ಬಿಡುಗಡೆ ಆಗದಿರುವ ವಿಷಯ ತೀರಾ ಚಿಂತಿಸಬೇಕಾದ ವಿಷಯ. ಸರ್ಕಾರ ಈ ಸಮಸ್ಯೆಗಳನ್ನು ಪರಿಹಾರ ಮಾಡಲು ಕ್ರಮ ಕೈಗೊಂಡಿದಯೇ? ಕ್ರಮ ಕೈಗೊಳ್ಳುವುದೇ? ಎಷ್ಟು ದಿನದಲ್ಲಿ ದೂರವಾಣಿ ಸಂಪರ್ಕ ಬರಲಿದೆ? ಎಷ್ಟು ದಿನಗಳಲ್ಲಿ, ಎಷ್ಟು ಹಣವನ್ನು ಕಛೇರಿ ಖರ್ಚಿಗೆ ಬಿಡುಗಡೆ ಮಾಡುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಶಿಕ್ಷಣ ಸಚಿವರು) : (ಮುಖ್ಯಮಂತ್ರಿಗಳ ಪರವಾಗಿ)

ಶಿವಮೊಗ್ಗ ಜಿಲ್ಲಾ ಕೈಗಾರಿಕಾ ಕೇಂದ್ರದ ದೂರವಾಣಿ ಸಂಪರ್ಕ ಕಡಿದು ಹೋಗಿರುವುದು ನಿಜ. ಈ ವರ್ಷದ ಬಡ್ಜೆಟ್‌ನಲ್ಲಿ ಹಣ ಒದಗಿಸುವಾಗ ಸರ್ಕಾರದ ಮಿತವ್ಯಯ ಗಮನದಲ್ಲಿಟ್ಟುಕೊಂಡು ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಒಟ್ಟು 5.53 ಲಕ್ಷ ರೂಪಾಯಿ ಹಣವನ್ನು ಕಛೇರಿ ವೆಚ್ಚಕ್ಕಾಗಿ ಬಿಡುಗಡೆ ಮಾಡಲಾಗಿತ್ತು. ಹಿಂದಿನ ವರ್ಷಗಳಲ್ಲಿ ಈ ಬಗ್ಗೆ ಹೆಚ್ಚಿನ ಖರ್ಚು ಆಗಿದ್ದುದರಿಂದ, ಈ ವರ್ಷ ಮಿತವ್ಯಯದ ಕಾರಣದಿಂದಾಗಿ ಕಡಿಮೆ ಹಣ ಒದಗಿಸಲಾಗಿತ್ತು. ಶಿವಮೊಗ್ಗ ಜಿಲ್ಲೆಗೆ 23,000 ರೂಪಾಯಿ ಬಿಡುಗಡೆ ಮಾಡಲಾಗಿತ್ತು. ಕಛೇರಿ ವೆಚ್ಚಗಳನ್ನು ಭರಿಸಲು ಈ ಹಣ ಸಾಗಾಗದ ಕಾರಣ ದೂರವಾಣಿ ಸಂಪರ್ಕ ಕಡಿದಿದೆ. ಅದೇ ರೀತಿ ನಿತ್ಯೋಪಯೋಗಕ್ಕೆ ಬೇಕಾಗಿರುವ ಪೇಪರ್ ಇತ್ಯಾದಿಗಳಿಗೂ ಒದಗಿಸಲಾಗಿದ್ದ ಹಣ ಸಾಕಾಗಿರುವುದಿಲ್ಲ. ಈ ಕಾರಣದಿಂದ, ಶಿವಮೊಗ್ಗ ಕೈಗಾರಿಕಾ ಕೇಂದ್ರದಿಂದ ರೂ. 1-00 ಲಕ್ಷ ಹೆಚ್ಚಿನ ಹಣ ಕೋರಿ ಪ್ರಸ್ತಾವನೆ ನಿರ್ದೇಶಕರಿಗೆ ಬಂದಿತ್ತು. ಇದೇ ರೀತಿ ಇದ್ದರೆ ಜಿಲ್ಲೆಗಳಿಂದಲೂ ಹೆಚ್ಚಿನ ಹಣಕ್ಕೆ ಕೋರಿಕೆ ಬಂದಿದ್ದುದರಿಂದ, ನಿರ್ದೇಶಕರು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರು ಒಟ್ಟು ರೂ. 30.00 ಲಕ್ಷ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಇದನ್ನು ಪರಿಶೀಲಿಸಿ, ಸರ್ಕಾರವು ಒಟ್ಟು 10-00 ಲಕ್ಷ ರೂ. ಗಳನ್ನು ದಿನಾಂಕ 19.2.91ರಂದು ಬಿಡುಗಡೆ ಮಾಡಿದೆ. ಈ ಹಣವನ್ನು ನಿರ್ದೇಶಕರು ದಿನಾಂಕ 22.2.91 ರಂದು ಮರು ಹಂಚಿಕೆ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆಗೆ 35,500 ರೂ. ಗಳನ್ನು ಬಿಡುಗಡೆ ಮಾಡಿದ್ದಾರೆ. ಈಗ ಬಿಡುಗಡೆ ಮಾಡಿರುವ ಹಣದಿಂದ ದೂರವಾಣಿ ಕಡಿದು ಹೋಗಿರುವುದನ್ನು ಪುನಃ ಸಂಪರ್ಕಗೊಳಿಸಲು ಹಾಗೂ ಇತರೆ ಕಛೇರಿ ವಸ್ತುಗಳನ್ನು ಕೊಳ್ಳಲು ಸಾಧ್ಯವಾಗುವುದು. ಈ ಬಗ್ಗೆ ಜಿಲ್ಲಾ ಕೈಗಾರಿಕಾ ಕೇಂದ್ರದ ಮಹಾಕಾರ್ಯ ನಿರ್ವಾಹಕರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಕೆಲವೇ ದಿನಗಳಲಿ ದೂರವಾಣಿ ಮರು ಸಂಪರ್ಕ ಪಡೆಯುವ ಸಾಧ್ಯತೆ ಇದೆ.